# ಅಳುವದ್ಯಾತಕೊ ರಂಗ ಅತ್ತರಂಜಿಪ ಗುಮ್ಮ

1. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 359.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 36.
3. **Note:** The lyrics in Ref. 1 mentioned are given without highlights. The wordings in Ref. 2 are slightly different and not considered here.
4. **Note:** The singer has followed the lyrics in Ref. 1.

ರಾಗ: ಹಿಂದೂಸ್ತಾನಿ ಕಾಪಿ ತಾಳ: ಆದಿ

ಅಳುವದ್ಯಾತಕೊ ರಂಗ ಅತ್ತರಂಜಿಪ ಗುಮ್ಮ || p ||

ಪುಟ್ಟಿದೇಳು ದಿವಸದಲಿ ದುಷ್ಟ ಪೂತನಿಯ ಕೊಂದೆ
ಮುಟ್ಟಿ ವಿಷದ ಮೊಲೆಯುಂಡ ಕಾರಣ
ದೃಷ್ಟಿ ತಾಕಿತೆ ನಿನಗೆ ರಂಗಯ್ಯ || 1 ||

ಬಾಲಕತನದಿ ಗೋಪಾಲಕರೊಡಗೂಡಿ
ಕಾಳಿಂದಿ ಮಡುವನು ಕಲಕಿದ ಕಾರಣ
ಕಾಲು ಉಳುಕಿತೆ ನಿನಗೆ ರಂಗಯ್ಯ || 2 ||

ತುರುವ ಕಾಯಲು ಪೋಗೆ ಭರದಿ ಇಂದ್ರ ಮಳೆಗರೆಯೆ
ಬೆರಳಲಿ ಬೆಟ್ಟವನೆತ್ತಿದ ಕಾರಣ
ಬೆರಳು ಉಳುಕಿತೆ ನಿನಗೆ ರಂಗಯ್ಯ || 3 ||

ವಸುದೇವ ಸುತನಾಗಿ ಅಸುರರೆಲ್ಲರ ಮಡುಹಿ
ಹೆಸರಿನ ಮಲ್ಲರ ಮಡುಹಿದ ಕಾರಣ
ಕಿಸರು ತಾಕಿತೆ ನಿನಗೆ ರಂಗಯ್ಯ || 4 ||

ಶರಣು ವೇಲಾಪುರದ ಚೆಲುವ ಚೆನ್ನಿಗರಾಯ

ಪರಿಪರಿ ವಿಧದಿಂದ ಶರಣರ ಪೊರೆಯುವ
ವರದ ಪುರಂದರ ವಿಠಲ ರಾಯ || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಪುರಂದರ ದಾಸರು ಬೇಲೂರಿಗೆ ಬಂದಿದ್ದಾಗ ನಡೆದ ಘಟನೆ. ಬೇಲೂರಿನಲ್ಲಿ ಇರುವ ವೈಕುಂಠ ದಾಸರು ಕೃಷ್ಣನ ಪರಮ ಭಕ್ತರು. ವೈಕುಂಠ ದಾಸರಿಗೆ ಮಕ್ಕಳಿರಲಿಲ್ಲ. ಅವರು ಕೃಷ್ಣನನ್ನೇ ಮಗನೆಂದು ಭಾವಿಸಿದ್ದರು. ಬಾಲ ಕೃಷ್ಣನನ್ನು ಒಂದು ದಿನ ತಮ್ಮ ತೊಡೆಯ ಮೇಲೆ ಮಲಗಿಸಿಕೊಂಡಿದ್ದರು. ಆಗ ಪುರಂದರ ದಾಸರು ಅಲ್ಲಿಗೆ ಬಂದಾಗ ವೈಕುಂಠ ದಾಸರು ಗಮನಿಸುವುದಿಲ್ಲ. ಆ ಮಗು ಪುರಂದರ ದಾಸರನ್ನು ನೋಡಿ ಕಿಟಾರನೆ ಕಿರುಚಿ ಅಳುತ್ತದೆಯಂತೆ. ಆ ಸಂದರ್ಭದಲ್ಲಿ ಪುಟ್ಟ ಕಂದಮ್ಮನ ರೂಪದಲ್ಲಿರುವ ಶ್ರೀ ಕೃಷ್ಣನನ್ನು ನೋಡಿ ಈ ಹಾಡನ್ನು ಹೇಳಿದರೆಂದು ಪ್ರತೀತಿ.

**ಅತ್ತರಂಜಿಪ** = ಅತ್ತರೆ ಅಂಜಿಸುವನು ಗುಮ್ಮ

**ಗುಮ್ಮ** – ಗುರ್ವು; ದೆವ್ವ.

**ಕಿಸುರು** – ಕಿಸುರ್, ಕಣ್ಣಿಸುರ್, ಕೆಟ್ಟಕಣ್ಣು, ದೃಷ್ಟಿದೋಷ.

**ವೇಲಾಪುರ** = ಈಗಿನ ಬೇಲೂರು, ಕರ್ನಾಟಕ ರಾಜ್ಯ. ಮುಂಚಿನ ಹೆಸರುಗಳು: ವೇಲಾಪುರ / ವೇಲುರ್ / ಬೆಲಹೂರ್

**Classification:** Keerthane
**Ankita:** varada purandara vittala
**Location:** Belur, Karnataka. This song is probably written and sung here (earlier Velapura / Velur / Belahoor in Karnataka)
**Category:** Krishna Stuti
**Group Words:** Krishna, putani, visha, kalinga, Vishnu, asura, deva
**Pravachana:** NA